ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ನ್ಯಾಯಾಲಯ.
ತಿ.ನರಸೀಪುರ.

ಅಸಲು ದಾವೆ.ನಂ:342/2024

ವಾದಿ : : ಶ್ರೀಮತಿ ಕವಿತ

ವಿರುದ್ಧ

ಪ್ರತಿವಾದಿಗಳು : : ಚಂದ್ರಶೇಖರ ಮತ್ತು ಇನ್ನೊಬ್ಬರು

**ದಿವಾನೀ ಪ್ರಕ್ರಿಯಾ ಸಂಹಿತೆ ಆದೇಶ 18 ನಿಯಮ 4 ರ ರೀತ್ಯಾ ಪ್ರಮಾಣಪತ್ರದ ಮೂಲಕ ವಾದಿಯ ಪರ ಸಾಕ್ಷಿಯ ಮುಖ್ಯ ವಿಚಾರಣೆ:-**

ಸಾಕ್ಷಿದಾರರ ಹೆಸರು : ಹುಚ್ಚಯ್ಯ,
ತಂದೆಯ ಹೆಸರು : ಲೇಟ್ ಚಿಕ್ಕಮೊಗ,
ವಯಸ್ಸು : 52 ವರ್ಷ,
ವೃತ್ತಿ : ವ್ಯವಸಾಯ,
ವಾಸ : ಪಟ್ಟೇಹುಂಡಿ,

PW-2
5/6/26.

ನಾನು, ಹುಚ್ಚಯ್ಯ, ಈ ಕೇಸಿನ ವಾದಿಯ ಪರ ಸಾಕ್ಷಿಯಾಗಿ ದೇವರ ಹೆಸರಿನಲ್ಲಿ ಪ್ರಮಾಣಿಸಿ ಹೇಳುವುದೇನೆಂದರೆ,

ನನಗೆ ಈ ಕೇಸಿನ ವಾದಿ ಹಾಗೂ ಪ್ರತಿವಾದಿಗಳು ಗೊತ್ತು. ಪ್ರತಿವಾದಿಗಳು ದಾವಾ ಷೆಡ್ಯೂಲ್ ಆಸ್ತಿಯನ್ನು ರೂ.4,70,000/-ಗಳಿಗೆ ವಾದಿಗೆ ಮಾರಾಟ ಮಾಡಲು ಒಪ್ಪಿ ಸಾಕ್ಷಿದಾರರಾದ ನನ್ನ ಮತ್ತು ನಮ್ಮ ಗ್ರಾಮದ ಚಿನ್ನಸ್ವಾಮಿ ರವರುಗಳ ಸಮ್ಮುಖದಲ್ಲಿ ದಿನಾಂಕ:29-09-2022ರಂದು ಪ್ರತಿವಾದಿಗಳು ವಾದಿಯಿಂದ ಮುಂಗಡವಾಗಿ ರೂ.4,00,000/-ಗಳನ್ನು ಪಡೆದು ಅದೇ ದಿನ ವಾದಿಯ ಹೆಸರಿಗೆ ನೋಂದಾಯಿತ ಕ್ರಯದ ಕರಾರನ್ನು ಬರೆದುಕೊಟ್ಟಿರುತ್ತಾರೆ. ಸದರಿ ನೋಂದಾಯಿತ ಕ್ರಯದ ಕರಾರಿಗೆ ಮೇಲೆ ತಿಳಿಸಿದ ಪ್ರತಿವಾದಿಗಳು ಹಾಗೂ ವಾದಿ ನಮ್ಮಗಳ ಸಮಕ್ಷಮ ಸಹಿಗಳನ್ನು ಮಾಡಿರುತ್ತಾರೆ. ನಂತರ ನಾನು ಮತ್ತು ನಮ್ಮ ಗ್ರಾಮದ ಚಿನ್ನಸ್ವಾಮಿರವರು ಸಾಕ್ಷಿದಾರರಾಗಿ ಸಹಿಗಳನ್ನು ಮಾಡಿರುತ್ತೇವೆ. ಸದರಿ ನೋಂದಾಯಿತ ಕ್ರಯದ ಕರಾರನ್ನು ಎಸ್.ಎಲ್.ಚಿಕ್ಕಣ್ಣನವರು ಗಣಕೀಕೃತಗೊಳಿಸಿ ಬಿಕ್ಲಂ ಹಾಕಿರುತ್ತಾರೆ. ಸದರಿ ದಾಖಲೆ ಹಾಗೂ ನನ್ನ ಸಹಿಯನ್ನು ನ್ಯಾಯಾಲಯದಲ್ಲಿ ನೋಡಿದರೆ ಗುರುತಿಸುತ್ತೇನೆ.

ಮೇಲೆ ಹೇಳಿದ ಎಲ್ಲಾ ವಿಚಾರಗಳು ಸತ್ಯವಾಗಿದೆ ಎಂದು ಪ್ರಮಾಣಿಸಿ ಈ ಪ್ರಮಾಣಪತ್ರಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ.

ಗುರುತಿಸುವವರು

A. [signature]
ವಕೀಲರು

NOTARY
SIDDAPPAJICHARY
B.Com LL.B
Mysore District
Reg.No.6463
GOVERNMENT OF INDIA

ಹುಚ್ಚಯ್ಯ
ಪ್ರಮಾಣೀಸುವವರು

Solemnly Affirmed & Declared
before me on 5-6-24

Notary, Mysore District

No of Corrections...nil

**ಸಾಕ್ಷಿಗೆ ದಿನಾಂಕಃ 05.06.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಆರ್.ಎಂ. ವಕೀಲರಿಂದಃ**

ಇಂದು ನಾನು ನನ್ನ ಸಾಕ್ಷಿಯ ವಿಚಾರಣೆ ಕುರಿತಂತೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳೆಲ್ಲವೂ ಸತ್ಯವಾಗಿರುತ್ತದೆ ಅದನ್ನು ನಾನೇ ನಮ್ಮ ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ ಮತ್ತು ಅದಕ್ಕೆ ಸಹಿ ಹಾಕಿರುತ್ತೇನೆ.

ಸಾಕ್ಷಿಯು ನಿ.ಪಿ.1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1(ಎ) ಎಂದು, ಸದರಿ ಪತ್ರಕ್ಕೆ ಚಿನ್ನಸ್ವಾಮಿ ಎನ್ನುವವರು ನನ್ನೊಂದಿಗೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಸದರಿ ಪತ್ರವನ್ನು ಚಿಕ್ಕಣ್ಣ ಎನ್ನುವವರು ಬರೆದಿರುತ್ತಾರೆ. ಕರಾರು ಪತ್ರಕ್ಕೆ ಚಂದ್ರಶೇಖರ್ ಮತ್ತು ಪುಷ್ಪ ಮತ್ತು ವಾದಿ ಕವಿತಾ ರವರು ಸಹಿ ಮಾಡಿರುತ್ತಾರೆ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

ಪುಟ್ಟೇಗೌಡ

**ಓ ಹೇ ಕೇ ಸ ಇ ಒ.**

05/6/26

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**